ಕೋಲಾರ ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 10ನೆ ಅಕ್ಟೋಬರ್ 1903ನೆ ಇಸವಿ.

ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ, ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಆಯಾ ಯ ತಾ॥ ಅಮಲ್ದಾರ್ರ ಕಚೇರಿಯಲ್ಲಿ, 1903ನೆ ಡಿಸೆಂಬರ್ ಮಾಹೆ 4ನೆ ತಾ॥ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಅದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಮಾಲೂರು ತಾ॥ ನರಸಾಪುರದ ಹೋಬಳಿ ಜೋಡಿ ಮುತ್ತಕದ ಹಳ್ಳಿ ಗ್ರಾಮ.
ಕೋಲಾರ ತಾ॥ ಹುತ್ತೂರು ಹೋಬಳಿ ಖಾಯಂಗುತ್ತಾ ಪಾರೇ ಹೊಸಹಳ್ಳಿ ಗ್ರಾಮ.

(ಹೆಚ್ಚು ತಪಶೀಲ್ ಬಗ್ಯೆ 22ನೆ ಮಾರ್ಕಂ 41ನೆ ನಂಬರ ಮೈಸೂರ ಗೆಜೆಟಿನ 2ನೆ ಭಾಗದ 526—525ನೆ ನಂಬರ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್, ಡೆಪ್ಯೂಟಿ ಕಮಿಷನರ್.

ನೋಟಸ್.

ಬೆಂಗಳೂರು ರೇಂಜ್ ಅ॥ ಕ॥ ಕಛೇರಿಯಿಂದ.

ತಾರೀಖು 14ನೆ ಅಕ್ಟೋಬರ್ 1903.

ಹೆಸರಘಟ್ಟದ ಕೆರೆ ಬಡಾವಣೆಗಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಟ್ಟ ಜಮೀನುಗಳಿಗೆ ಕಂಪೆನ್ಸೇಷನ್ ಕರಾರಾಗಲ್ಪಟ್ಟು ಇದರಿಂದ ಕಂಡ ಮೂರು ಕೇಸುಗಳು ಶಿವಾಯಿ ಬಾಕಿ ಎಲ್ಲಾ ಕೇಸುಗಳ ವಿಚಾರ ವೆವಸ್ಥೆ ಆಗಿರುತ್ತೆ. ಸದರಿ 3 ಕೇಸುಗಳ ಪೈಕಿ ಒಂದು ಕೇಸಿನಲ್ಲಿ ಮಾಲೀಕರು ಮೊಬಲಗು ತೆಗದುಕೊಳ್ಳದೇಲು ನಿಂತ ಎರಡು ಕೇಸುಗಳಲ್ಲಿ ಮಾಲೀಕರು ಇರತಕ್ಕ ಸ್ಥಳ ಗೊತ್ತು ಇಲ್ಲದೆ ಇರುತ್ತೆ. ಈ ಕಾರಣದಿಂದ ಇಸ್ತಿಹಾರ್ ಗೆಜಟ್ಟಿನಲ್ಲಿ ಛಾಯಿಷ್ ಮಾಡಿರುತ್ತೆ. ಇಸ್ತಿಹಾರ್ ಛಾಯಿಷ್ ಆದ ತಾರೀಖು ಲಾಗಾಯಿತು (3) ಮೂರು ತಿಂಗಳು ವಳಗಾಗಿ ಮಾಲೀಕರೆ ಆಗಲಿ ಅಥವಾ ಅವರಿಗೆ ಸಂಬಂಧಪಟ್ಟವರೆ ಆಗಲಿ ತಮ್ಮಲ್ಲಿ ಇರತಕ್ಕ ದಾಖಲೆ ನಿಶಿ ಬೆಂಗಳೂರು ಮೊಕ್ಕಾಂ ನಮ್ಮ ಕಛೇರಿ ರೂಬರೂ ಹಾಜರಾಗಿ ಅವರ ಹಕ್ಕನ್ನ ಸ್ಥಿರಪಡಿಸಿಕೊಟ್ಟು ಮೊಬಲಗನ್ನ ಪಡದುಕೊಳ್ಳಬಹುದು. ತಪ್ಪಿದರೆ ಮೊಬಲಗನ್ನ ಶಿವಾಯಿ ಜವೆಗೆ ದಾಖಲ್ಮಾಡಲ್ಪಡುತ್ತೆ ತಿಳಿಯುವದು.

1. ನೆಲಮಂಗಲ ತಾಲ್ಲೂಕು ಜೋಡಿ ಐವರಕಂಡಪುರ ಗ್ರಾಮದ ವನಮಲವೃತ್ತಿ ಬಾ॥ ಮೂಲಪುರುಷ ರಾಮಾಪಂಡಿತ, ಭೋಗ್ಯದ [redacted] ಮುತ್ಕೂರು ಕೀನಪ್ಪ 1, ಡಿಟೋ ನರಸಾಪಂಡಿತ 1, ಇದರ ಬಗೆ ಕಂಪೆನ್ಸೇಷನ್ ಮೊಬಲಗು 12 ರೂಪಾಯಿ.

2. ದೊಡ್ಡಬಳ್ಳಾಪುರ ತಾಲ್ಲೂಕು ಗೊಂದಿಹಳ್ಳಿ ಕೃಷ್ಣಾಚಾರ್ರ ಬಗೆ ಇನಾಂ $\frac{1}{3}$ ಹಿಸ್ಸೆ ಮೊಬಲಗು ರೂ. 71—5—4 ಇನಾಂದಾರ್ರು ಇರತಕ್ಕ ಸ್ಥಳ ಪತ್ತೆಯಿಲ್ಲ.

3. ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕ ದೇವನಪುರ ಗ್ರಾಮದ ಮುನಿವೆಂಕಟನ ಭಾವಿ ಮತ್ತು ಹುಣಿಸೆ ಮರಕ್ಕೆ ಸಲ್ಲ ಬೇಕಾದ ಮೊಬಲಗು ರೂ. 66—0—0 ಇಸಂ ಇರತಕ್ಕ ಸ್ಥಳ ಗೊತ್ತು ಇಲ್ಲ.

ಬಿ. ಜೆ. ಕುಮಾರಸಾಮಿ ನಾಯಿಕ್,
ಅಸಿಸ್ಟೆಂಟ್ ಕಮಿಷನರ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 121.

ಮೃತಪಟ್ಟ ಮುತ್ಯಾಲಮ್ಮನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕೃಷ್ಣರಾಜಪುರದ ಹೋಬಳಿ ಖಾಯಂಗುತ್ತಾ ಶೀತಾರಾಮೈಯ್ಯನ ಪಾಳ್ಯದಲ್ಲಿರುವ ವೆಂಕಟಮ್ಮನೆಂಬುವರು, ಮೃತಪಟ್ಟ ಸದರೀ ಮುತ್ಯಾಲಮ್ಮನೆಂಬುವರಿಗೆ ಮುಖ್ಯ ವಾರಸದಾರಳು ಆಗಬೇಕೆಂಬ ಹಕ್ಕುದಾರಿ ಮೇಲೆ ಗರುಕಾಮಂತನ ಪಾಳ್ಯದಲ್ಲಿ ವಾಸಸ್ಥರಾಗಿ ಮೃತಪಟ್ಟ ಮುತ್ಯಾಲಮ್ಮನೆಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಮ್ಮನೆಂಬುವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತ್ಯಾಲಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಅಕ್ಟೋಬರ್ ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.